Budget Estimates for 1970-71—Demands for Grants

Demands No. 1,3,5,34,35,36,40,41,52, and 54.

SRI RAMAKRISHNA HEGDE.—Sir, on the recommendation of the Governor, I beg to move.

"That a sum not exceeding Rs. 10,39,000 be granted to the Government to defray the charges which will come in course of payment during the financial year for the period ending 31st day of March 1971, in respect of Taxes on Income other than Corporation Tax."

MR. SPEAKER.—Motion moved.

"That a sum not exceeding Rs. 10,39,000 be granted to the Government to defray the charges which will come in course of payment during the financial year for the period ending 31st day of March 1971, in respect of Taxes on Income other than Corporation Tax. The other demands *viz.*, No. 3,5,34,35, 36,40,41,52 and 54 are also deemed to have been moved."

Now the Hon. Members may offer their remarks on all these demands. *viz.*, of Demand Nos. 3,5,34,35,36,40,41,52 and 54.

ಶ್ರೀ ಎಸ್. ಶಿವಪ್ಪ.—ಒಂದು ಮುಖ್ಯವಾದ ವಿಚಾರ ಪ್ರೇಪರಗಳಲ್ಲಿ ದೊಡ್ಡದಾಗಿ ಬಂದಿದೆ. ನಾಳೆ ಬೆಂಗಳೂರು ಬಂದ್ ಆಗುವ ಪ್ರಯುಕ್ತ ಎನ್. ಡಿ. ಒ. ಗಳು ಕೂಡ ಆಫೀಸಿಗೆ ಬರಬಾರದೆಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಆದ್ದರಿಂದ ನೀವು ನಾಳೆ ಸಭೆಯನ್ನು ಯಾವ ರೀತಿ ನಡೆಸುತ್ತೀರಿ ?

MR. SPEAKER.—The matter will be considered by the Business Advisory Committee. ಈಗ ನಾವು ಡಿಮ್ಯಾಂಡ್ ಮೇಲೆ ಚರ್ಚೆ ಪ್ರಾರಂಭ ಮಾಡಬಹುದು.

†ಶ್ರೀ ಎಸ್. ಶಿವಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಮಾರಾಟ ತೆರಿಗೆ, ರಾಜ್ಯದ ಅಬಕಾರಿ ತೆರಿಗೆ ಮತ್ತು ಇತರೇ ಬಾಬುಗಳಿಗೆ ಸಂಬಂಧಪಟ್ಟಂತೆ ಕೆಲವು ಡಿಮ್ಯಾಂಡ ಗಳನ್ನು ಸಭೆಯ ಮುಂದೆ ಮುಂದನೆ ಮಾಡಿದ್ದಾರೆ. ಸೇಲ್ಸ್ ಟ್ಯಾಕ್ಸ್ ಮತ್ತು ಎಕ್ಸೈಜ್ ಟ್ಯಾಕ್ಸ್ ನಿಂದ ನಮ್ಮ ದೇಶದಲ್ಲಿ 65 ಕೋಟಿ ರೂಪಾಯಿಗಳ ವರಮಾನ ಇದೆ. ಸೇಲ್ಸ್ ಟ್ಯಾಕ್ಸ್ ಯಾವಾಗ ಪ್ರಾರಂಭವಾಯಿತು ಎಂಬ ಚರಿತ್ರೆ ಎಲ್ಲರಿಗೂ ಗೊತ್ತಿದೆ. ಪಾನನಿರೋಧವನ್ನು ಜಾರಿಗೆ ತಂದರೆ ಸರ್ಕಾರಕ್ಕೆ ಅದಾಯ ಕಡಿಮೆಯಾಗುತ್ತದೆ ಎಂಬ ಕಾರಣದಿಂದ ಮಾರಾಟ ತೆರಿಗೆಯನ್ನು ಜಾರಿಗೆ ತಂದು ಆದಾಯವನ್ನು ತುಂಬಿಕೊಳ್ಳಬಹುದೆಂದು ಶ್ರೀ ರಾಜಗೋಪಾಲಚಾರಿಯವರು ಸಲಹೆ ಮಾಡಿದರು. ಅದರಂತೆ ಮಾರಾಟ ತೆರಿಗೆಯನ್ನು ಹಾಕಲಾಗುತ್ತಿದೆ. ಇದರ ಜೊತೆಗೆ ಅಬಕಾರಿ ತೆರಿಗೆಯನ್ನು ಜಾರಿಗೆ ತಂದಿದ್ದು ಸಾಲದೆ ಈಗ ಮೂರನೆಯದಾಗಿ ರಾಟರಿ ಯೋಜನೆಯನು ತಂದು ಆ ಮೂಲಕ ತೆರಿಗೆಯನ್ನು ಹಾಕಲಾಗುತ್ತಿದೆ. ಇದು ಯಾವ ರೀತಿ ಇದೆಯೆಂದರೆ ಮೊನ್ನೆ ಕೃಷ್ಣ ರಾಜಪುರದಲ್ಲಿ ಪೂಲೀಸರು ಒಬ್ಬನಿಗೆ ತಲೆ ಬೋಳಿಸಿ ಮೂರು ಪಟ್ಟೆ ಹಾಕಿ ಬೀದಿಯಲ್ಲಿ ಮೆರವಣಿಗೆ ಮಾಡಿಸಿದಂತೆ ಇದೆ. ರಾಜ್ಯದ ಜನರಿಗೆ ಈ ರೀತಿ ಮೂರು ತರಹದ ತೆರಿಗೆಗಳನ್ನು ಹಾಕಿ ತಿರುಪತಿ ಕ್ಷೌರ ಮಾಡಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಇದರಲ್ಲಿ ಕ್ಷೌರಿಕ ಯಾರು ?

ಶ್ರೀ ಎಸ್. ಶಿವಪ್ಪ.—ಮಾನ್ಯ ಸಿದ್ದವೀರಪ್ಪನವರು ಹೇಳಿದಂತೆ ಇವರು ದೇಶದ ಜನರಿಗೆ ಮೂರು ರೀತಿಯ ಕ್ಷೌರ ಮಾಡುತ್ತಿದ್ದಾರೆ. ಕ್ಷೌರ ಮಾಡುವ ವಿಧಾನವನ್ನು ಇವರು ಅಲ್ಲಿಗೆ ಹೋಗಿ ತರಬೇತಿ ಪಡೆದು ಬಂದಿರಬೇಕೆಂದು ಕಾಣುತ್ತದೆ. ಪಾನನಿರೋಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರೆ ಸರ್ಕಾರಕ್ಕೆ ಆಗತಕ್ಕಂಥ ಹಣದ ಕೊರತೆಯನ್ನು ತುಂಬಿಸಲು ಮಾರಾಟ ತೆರಿಗೆಯನ್ನು

(ಶ್ರೀ ಎಸ್. ಶಿವಪ್ಪ)

ಜಾರಿಗೆ ತಂದರು. ಈಗ ಅದರಿಂದ ಬರುವ ಆದಾಯವೂ ಕೂಡ ಸಾಲದೆ ಮತ್ತೆ ಪಾನನಿರೋಧವನ್ನು ಗಾಂಧಿ ಶತಾಬ್ದಿ ವರ್ಷದಲ್ಲಿ ತೆಗೆದುಹಾಕಿದರು. ಇವತ್ತಾದರೂ ಕೂಡ ಸರ್ಕಾರಕ್ಕೆ ಹಣ ಸಾಲದಾಗಿದೆ. ಸರ್ಕಾರದ ಬೊಕ್ಕಸ ಬಕಾಸುರನ ಹೊಟ್ಟೆಇದ್ದಂತೆ ಇವೆ. ಬಕಾಸುರನಿಗೆ ದಿನಕ್ಕೆ ಒಂದು ಗಾಡಿ ಅನ್ನ ಬೇಕಾಗುತ್ತಿತ್ತು. ಅದಕ್ಕಾಗಿ ಊರಿನ ಜನರು ತಾವು ಉಪವಾಸ ಮಾಡಿ ಬಕಾಸುರನಿಗೆ ಅನ್ನವನ್ನು ಒದಗಿಸುತ್ತಿದ್ದರು. ಅದರಂತೆ ಈಗ ಸರ್ಕಾರಕ್ಕೆ ಸೇಲ್ಸ್ ಟ್ಯಾಕ್ಸ್ ಮತ್ತು ಎಕ್ಸೈಜ್ ಟ್ಯಾಕ್ಸ್‌ನಿಂದ ಬರುವ ಆದಾಯ ಸಾಲದೆ ರಾಟರಿ ಯೋಜನೆಯನ್ನು ಜಾರಿಗೆತಂದಿದ್ದಾರೆ. ಬಕಾಸುರನಿಗೆ ಅನ್ನ ಕೊಟ್ಟು ಕೊಟ್ಟು ಕೊನೆಗೆ ಬೇಜಾರಾಗಿ ಒಂದು ದಿನ ಆತನನ್ನು ಊರಿನ ಜನ ಸೇರಿಕೊಂಡು ಉಪಾಯದಿಂದ ಯಾವ ರೀತಿ ವಧೆ ಮಾಡಿದರೋ ಅದರಂತೆ ಈ ರಾಜ್ಯದ ಜನರು ಸಹ ತೆರಿಗೆಯ ಹೊರೆಯನ್ನು ಹೊರಲಾರದೆ ಒಂದು ದಿನ ಈ ಸರ್ಕಾರವನ್ನು ವಧೆ ಮಾಡುವ ಕಾಲ ಬರುತ್ತದೆ. ಆ ಕಾಲ ದೂರವಿಲ್ಲ. ದಿನಬೆಳಿಗ್ಗೆಯಾದರೆ ಮಾರಾಟ ತೆರಿಗೆಯನ್ನು ಹೆಚ್ಚು ಮಾಡುವ ಬಗ್ಗೆ ತಿದ್ದುಪಡಿಯನ್ನು ಮಾಡುತ್ತಲೇ ಇರುತ್ತಾರೆ. ಈ ರಾಜ್ಯದಲ್ಲಿರುವಂಥ ತೆರಿಗೆ ಬಹುತಃ ಪ್ರಪಂಚದ ಬೇರೆ ಯಾವ ರಾಜ್ಯದಲ್ಲಿಯೂ ಇಲ್ಲ ಬೇರೆ ದೇಶಗಳಲ್ಲಿ ಜನರು ತೆರಿಗೆಯನ್ನು ಸರ್ಕಾರಕ್ಕೆ ಕೊಟ್ಟರೂ ಕೂಡ, ಆ ಕಾರಣದಿಂದ ಸರ್ಕಾರದವರು ಜನರಿಗೆ ನಾನಾ ರೀತಿಯ ಸೌಕರ್ಯವನ್ನು ಒದಗಿಸುತ್ತಾರೆ. ಒಳ್ಳೆಯ ವಿದ್ಯಾಭ್ಯಾನವನ್ನು ಕೊಡುತ್ತಾರೆ, ವೈದ್ಯಕೀಯ ಸೌಲಭ್ಯವನ್ನು ಕೊಡುತ್ತಾರೆ, ಹೊಟ್ಟೆತುಂಬಾ ಅನ್ನವನ್ನು ಒದಗಿಸುತ್ತಾರೆ. ಮೈತುಂಬಾ ಬಟ್ಟೆಯನು ಒದಗಿಸುತ್ತಾರೆ, ವಾಸಕ್ಕೆ ಮನೆಯನ್ನು ಒದಗಿಸುತ್ತಾರೆ, ಈ ಕಾರಣದಿಂದ ಮುಂದುವರೆದ ರಾಜ್ಯಗಳಲ್ಲಿ ಜನರು ಸಂತೋಷದಿಂದ ತೆರಿಗೆಯನ್ನು ಕೊಡುತ್ತಿದ್ದಾರೆ. ಆದರೆ ಇಲ್ಲಿ ತೆರಿಗೆ ತೆಗೆದುಕೊಂಡರೂ ಕೂಡ ಬಡಜನರಿಗೆ ಬೇಕಾದ ಅನುಕೂಲಗಳನ್ನು ಒದಗಿಸುತ್ತಿಲ್ಲ. ಸಮಾಜವಾದದ ಹೆಸರಿನಲ್ಲಿ ರಾಜ್ಯಭಾರ ಮಾಡುತ್ತಿರುವ ನೀವು ಮುಂದುವರೆದ ರಾಜ್ಯಗಳಿಗೆ ಹೋಗಿ ಅವರು ಯಾವ ರೀತಿ ಮಾಡುತ್ತಿದ್ದಾರೆಂಬುದನ್ನು ನೋಡಿಕೊಂಡು ಬನ್ನಿ. ಕೊಡುವ ತೆರಿಗೆಯನ್ನು ಸರ್ಕಾರದವರು ತಮಗಾಗಿಯೇ ಖರ್ಚು ಮಾಡುತ್ತಾರೆಂಬ ನಂಬಿಕೆ ಆ ದೇಶಗಳಲ್ಲರುವ ಜನರಲ್ಲಿ ಇದೆ. ಆದರೆ ನಮ್ಮ ರಾಜ್ಯದಲ್ಲಿ ಆ ನಂಬಿಕೆ ಇಲ್ಲವಾಗಿದೆ. ಮಾರಾಟ ತೆರಿಗೆ ಇಲಾಖೆ ಯಾವ ರೀತಿ ಕೆಲಸ ಮಾಡುತ್ತಿದೆ ಎಂದರೆ ಅಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳ ವೈಭವ ಮತ್ತು ವೈಶಿಷ್ಟ್ಯವನ್ನು ಹೇಳುವುದು ಕಷ್ಟವಾಗಿದೆ. ಅಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಕುಬೇರರಾಗಿದ್ದಾರೆ. ಮಾರಾಟ ತೆರಿಗೆಯಿಂದ ಸರ್ಕಾರಕ್ಕೆ ಎಷ್ಟು ಹಣ ಬರುತ್ತಿದೆಯೋ ಅದರಲ್ಲಿ ಬಹುಭಾಗ ಈ ಅಧಿಕಾರಿಗಳ ಜೇಬಿಗೆ ಹೋಗುತ್ತಿದೆ. ಇಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಿಮಗೆ ಶಕ್ತಿ ಇದೆಯೇ ಎಂದು ಕೇಳುತ್ತೇನೆ. ನಮ್ಮ ಹಾಸನ ಜಿಲ್ಲೆಯಲ್ಲರುವ ಜಿಲ್ಲಾ ಸೇಲ್ಸ್ ಟ್ಯಾಕ್ಸ್ ಆಫೀಸರ್ ಅವರ ಮನೆಯನ್ನು ಇನ್‌ಕಂ ಟ್ಯಾಕ್ಸ್ ಆಫೀಸರ್ ಅವರು ದಾಳಿ ಮಾಡಿದಾಗ ಅವರಿಗೆ ಹೇರಳವಾದ ಹಣ ಸಿಕ್ಕಿತು. ಆ ಹಣ ಯಾವ ರೀತಿ ಬಂತು ಎಂಬುದಕ್ಕೆ ಲೆಕ್ಕ ಇಲ್ಲ. ಈಗ ಆ ಅಧಿಕಾರಿಯು ಮೇಲೆ ಕೇಸ್ ಹಾಕಿದ್ದಾರೆ.

ಇದನ್ನು ಸರ್ಕಾರದವರು ತನಿಖೆ ಮಾಡಿಸ್ದೀರಾ ? ಅವರಿಗೆ ಶಿಕ್ಷೆ ಕೊಟ್ಟಿದ್ದೀರಾ ? ಅವರು ನಿಮಗೆ ಬೇಕಾದವರು ಇರಬಹುದು. ಅವರು ನಿಮಗೆ ಅನೇಕ ರೀತಿಯು ಉಪಕಾರಗಳನ್ನು ಕೊಟ್ಟು ಸರ್ಕಾರ ಅವರ ಪ್ರೀತಿಗೆ ಒಳಗಾಗಿರಬಹುದು.

ಶ್ರೀ ಎಚ್. ಎನ್. ನಂಜೇಗೌಡ.—ಮಂತ್ರಿಗಳಿಗೇ ಕೊಡಬೇಕು ಎಂದು ದುಡ್ಡು ವಸೂಲು ಮಾಡುತ್ತಿದ್ದಾರೆ.

ಶ್ರೀ ಎಸ್. ಶಿವಪ್ಪ.— ಅವರು ಹೇಳುವ ಮಾತನ್ನು ನಂಬಬೇಕು. ಇಂಥಾ ವಿಚಾರಗಳನ್ನು ಕಂಡರೂ ಕಾಣದೆ ಇರುವ ಹಾಗಿದ್ದಾರೆ. ಲಕ್ಷಾಂತರ ರೂಪಾಯಿಗಳು ಅಪವ್ಯಯವಾಗುತ್ತಿದೆ. ಹೀಗಿದ್ದರೂ ಇವರು ನುಮ್ಮನ್ನೇ ಇರುವುದನ್ನು ನೋಡಿದರೆ ನಾಚಿಗೇಡಿತನ. ಬೆಂಗಳೂರು ನಗರದಲ್ಲಿ ಎಷ್ಟು ಜನ ಅಧಿಕಾರಿಗಳು ಸಾವಿರಾರು ರೂಪಾಯಿಗಳನ್ನು ಸಂಪಾದನೆ ಮಾಡಿಕೊಂಡು ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಕೊಂಡಿದ್ದಾರೆ. ಅನೇಕರು ವೈಭವ ಜೀವನವನ್ನು ನಡೆಸುತ್ತಿದ್ದಾರೆ. ಅವರೆಲ್ಲರಿಗೂ ಎಲ್ಲಿಂದ ಹಣ ಬಂತು ಎಂದು ವಿಚಾರಣೆ ಮಾಡಿದ್ದೀರಾ ? ಈ ದೇಶದಲ್ಲಿ ಸರ್ಕಾರ ಇದೆಯೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಇಷ್ಟು ದಿವಸಗಳು ಕೋಟಾ ನೋಟುಗಳ ಚಲಾವಣೆ ಆಯಿತು. ಈಗ ಭೋಗಸ್ ರಾಟರಿ ಚೀಟಿಗಳು ಬಂದಿದೆ. ರಾಟರಿಯನು ನಡೆಸತಕ್ಕ ದಕ್ಷತೆ ಸರ್ಕಾರಕ್ಕೆ ಇಲ್ಲದೆ ಅಂಗಡಿ ಬೀದಿ ಬೀದಿಯಲ್ಲಿ ಕೋಟಾ ಟಿಕೆಟ್‌ಗಳನ್ನು ಮಾರತಕ್ಕ ಖದೀಮರು ಇದ್ದಾರೆ. ಮೊದಲೇ ಕೋಟಾ ನೋಟನ್ನು ತಯಾರು ಮಾಡತಕ್ಕ ಖದೀ

ಮರು ಇದ್ದರು. ಅದರ ಜೊತೆಗೆ ಕೋಟಾ ರಾಟರಿ ಭೋಗಸ್ ಟಿಕೇಟ್‌ಗಳನ್ನು ಮಾಡಿ ಮಾರಾಟ ಮಾಡುವುದಕ್ಕೆ ಸರ್ಕಾರದವರು ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಯಾವುದೇ ಕೆಲಸ ವನ್ನಾಗಲೀ ಸರಿಯಾಗಿ ನಡೆಸಿಕೊಂಡು ಹೋಗತಕ್ಕ ದಕ್ಷತೆ ಸರ್ಕಾರಕ್ಕೆ ಇಲ್ಲ. ಸೇಲ್ಸ್ ಟ್ಯಾಕ್ಸ್ ಒಂದೇ ಅಲ್ಲ, ಎಕ್ಸೈಜ್ ಡಿಪಾರ್ಟ್‌ಮೆಂಟ್‌ನ್ನೂ ಹತೋಟಿಯಲ್ಲಿ ಇಟ್ಟುಕೊಂಡಿಲ್ಲ. ಇವರಿಗೆ ಬೇಕಾದವರಿಗೇ ಒಂದು ಕಾನೂನು ಬೇಡದವರಿಗೇ ಒಂದು ಕಾನೂನು. ಡೀ ನೇಚರ್ಡ್ ಸ್ಪಿರಿಟ್ ಅನ್ನು ಹೇಗೆ ಹಂಚುತ್ತಿದ್ದಾರೆ ಎಂದರೆ ಒಬ್ಬ ವ್ಯಕ್ತಿಗೆ ಬಹು ಭಾಗವನ್ನು ಕೊಡುತ್ತಿದ್ದಾರೆ. ಇದಕ್ಕೆ ಕಾರಣವೇನು ? ಅವರು ನಿಮ್ಮ ಸ್ನೇಹಿತರು ಇರಬಹುದು. ಕೋಡೆ ಅಂಡ್ ಬ್ರದರ್ಸ್ ಅವರ ಪರಿಸ್ಥಿತಿ ಏನಿತ್ತು ಇವೊತ್ತು ಅವರು ಕುಬೇರರಾಗಿದ್ದಾರೆ. ಅವರಿಗೆ ಹಣ ಎಲ್ಲಿಂದ ಬಂತು ? ಮೊನ್ನೆ ಮೊನ್ನೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ವಿದೇಶ ಪ್ರವಾಸಕ್ಕೆ ಹೋಗಿದ್ದಾಗ ಅವರ ಸ್ನೇಹಿತರೂ ಅವರ ಜೊತೆಯಲ್ಲಿ ಹೋಗಿದ್ದಾರೆ. ನಿಮಗೆ ಏತಕ್ಕೆ ಅವರ ಸ್ನೇಹ ? ಅವರು ಕೋಟ್ಯಾಧೀಶ್ವರರು ಇರಬಹುದು. ಆದರೆ ಅವರು ನಿಮಗಿಂತ ದೊಡ್ಡವರಲ್ಲ. ನಿಮ್ಮ ಆಡಳಿತದಲ್ಲಿ, ನಿಮ್ಮ ಅಧಿಕಾರಿಗಳಲ್ಲಿ ಬಿಗಿ ಇಲ್ಲದೇ ಇರುವುದರಿಂದ ಆಡಳಿತ ಸರಿಯಾಗಿ ನಡೆಯುತ್ತಿಲ್ಲ ಮತ್ತು ವಿಲಾಸಿಗಳ ಜೀವನ, ಭೋಗ ಜೀವನ ಈ ರಾಜ್ಯದಲ್ಲಿ ನಡೆಯುತ್ತಿರುವಾಗ ಈ ರಾಜ್ಯವನ್ನು ಹೇಗೆ ಕಟ್ಟುವುದಕ್ಕೆ ಸಾಧ್ಯ ! ನಿಮ್ಮ ಕೆಳಗಡೆ ಇರತಕ್ಕ ಅಧಿಕಾರಿಗಳು ಭೋಗ ವಿಲಾಸ ಜೀವನದಲ್ಲಿ ತೊಡಿಗಿದ್ದಾರೆ. ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳು ಅನುಸರಿಸತಕ್ಕ ನೀತಿ ಮತ್ತು ವಿಧಾನಗಳಿಂದ ಸರ್ಕಾರದ ಬೊಕ್ಕಸಕ್ಕೆ ಬರತಕ್ಕ ಹಣ ಕಡಿಮೆಯಾಗಿ, ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ಚ್ಯುತಿ ಬರುತ್ತದೆ. ಅಧಿಕಾರಿಗಳು ಸಣ್ಣ ಪುಟ್ಟ ವರ್ತಕರ ಮೇಲೆ ಕೇಸುಹಾಕುತ್ತಾರೆ. ಇವರು ದೊಡ್ಡ ದೊಡ್ಡ ವರ್ತಕರನ್ನು ಮಾತನಾಡಿಸುವುದಿಲ್ಲ. ಸಣ್ಣ ಸಣ್ಣ ವರ್ತಕರ ಮೇಲೆ ಏತಕ್ಕೆ ಕೇಸುಹಾಕುತ್ತಾರೆ ಎಂದರೆ ಇವರಿಗೆ ಅವರು ಹೆಚ್ಚು ದುಡ್ಡು ಕೊಡುವುದಿಲ್ಲ. ಕೆಲವು ವೇಳೆ ವರ್ತಕರು ಲೆಕ್ಕವನ್ನು ಇಟ್ಟಿಲ್ಲ ಎಂದು ಕೇಸುಹಾಕುತ್ತಾರೆ. ಕೆಲವರು ಲೆಕ್ಕವನ್ನು ಇಡದಿದ್ದರೂ ಅವರು ಲಂಚ ಕೊಟ್ಟರೆ ಅವರ ಮೇಲೆ ಕೇಸು ಹಾಕುವುದಿಲ್ಲ. ಈ ರೀತಿಯಾಗಿ ಈ ಇಲಾಖೆಯಲ್ಲಿ ವ್ಯವಹಾರಗಳು ನಡೆಯುತ್ತಿವೆ. ಸೇಲ್ಸ್ ಟ್ಯಾಕ್ಸ್ ಇಲಾಖೆಯಲ್ಲಿ ಇನ್‌ಸ್ಪೆಕ್ಟರೋ ಅಸಿಸ್ಟೆಂಟ್ ಇನ್‌ಸ್ಪೆಕ್ಟರೋ ಯಾವುದೋ ಒಂದು ಕೆಲಸವನ್ನು ಕೊಡಿ ಎಷ್ಟು ಹಣ ಬೇಕಾದರೂ ಕೊಡುತ್ತೇವೆ. ಎಂದು ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಅಧಿಕಾರಿಗಳಿಗೆ ಅಭ್ಯರ್ಥಿಗಳು ಕೇಳಿಕೊಳ್ಳುತ್ತಾರೆ ಏತಕ್ಕೆಂದರೆ ಸೇಲ್ಸ್ ಇಲಾಖೆಯಲ್ಲಿ ಸಂಬಳಕ್ಕಿಂತ ಗಿಂಬಳ ಜಾಸ್ತಿ ಸಿಕ್ಕುತ್ತದೆ ಎಂದು. ಸೇಲ್ಸ್ ಟ್ಯಾಕ್ಸ್ ಇಲಾಖೆಯಲ್ಲಿ ಹಣ ಯಾವ ರೀತಿ ಲೀಕೇಜ್ ಆಗುತ್ತದೆ ಎಂಬುದು ಶ್ರೀಮಾನ್ ಹೆಗಡೆಯವರಿಗೆ ಗೊತ್ತಿಲ್ಲ ಎಂದು ಕಾಣುತ್ತದೆ. ಅವರು ತಮ್ಮ ಆದಾಯವನ್ನು ಜಾಸ್ತಿ ಮಾಡಿಕೊಳ್ಳಬೇಕು, ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ಹಣ ಒರುವಂತೆ ಮಾಡಿಕೊಳ್ಳಬೇಕೆಂದು ತೆರಿಗೆಯ ಪರ್ಸೆಂಟೇಜನ್ನು ಜಾಸ್ತಿ ಮಾಡಬೇಕೆಂದು ಈ ಸಭೆಯ ಮುಂದೆ ತಿದ್ದು ಪಡಿ ಮನೂದೆಯನ್ನು ತಂದಿದ್ದಾರೆ. ನೀವು ಸೇಲ್ಸ್ ಟ್ಯಾಕ್ಸ್‌ಗೆ ಸಂಬಂಧಪಟ್ಟ ಹಾಗೆ ಎಷ್ಟೇ ಪರ್ಸೆಂಟೇಜ್ ಜಾಸ್ತಿ ಮಾಡಿದರೂ ಕೂಡ ಆ ಹಣವೆಲ್ಲಾ ಸೋರಿ ಹೋಗುತ್ತದೆ. ನಿಮ್ಮ ಖಜಾನೆ ತೂತು ಕೊಡ ಇದ್ದಹಾಗೆ ಇದೆ. ಅದಕ್ಕೆ ಎಷ್ಟು ಹಾಕಿದರೂ ಕೂಡ ಎಲ್ಲವೂ ಸೋರಿ ಹೋಗುತ್ತದೆ. ಸೇಲ್ಸ್ ಟ್ಯಾಕ್ಸ್‌ನಿಂದ ಬರತಕ್ಕ ಹಣದಲ್ಲಿ ಅರ್ಧಭಾಗ ಹಣವನ್ನು ಅಧಿಕಾರಿಗಳು ಹಂಚಿಕೊಳ್ಳುತ್ತಿದ್ದಾರೆ. ಸರ್ಕಾರದಲ್ಲಿ ಆಡಳಿತ ಬಿಗಿ ಇಲ್ಲ ಎಂದು ನಾನು ಒಂದು ದೊಡ್ಡ ಆಪಾದನೆಯನ್ನು ನಾನು ಸರ್ಕಾರದಮೇಲೆ ಮಾಡುತ್ತೇನೆ. ಮಂತ್ರಿಗಳಾಗಿರತಕ್ಕವರು ಇಲಾಖೆಗಳ ಮೇಲೆ ಸಾಕಷ್ಟು ಕಂಟ್ರೋಲ್ ಇಟ್ಟುಕೊಳ್ಳದೇ ಹೋದರೆ ಆಡಳಿತದಲ್ಲಿ ಬಿಗಿ ಇರುವುದಿಲ್ಲ. ಮತ್ತು ಸರ್ಕಾರದ ಮಂತ್ರಿಗಳಿಗೆ ಶ್ರೀಮಂತರು, ದೊಡ್ಡವರ ಬಾಂಧವ್ಯ ಏತಕ್ಕೆ, ಕೋಟ್ಯಾಧೀಶ್ವರರ ಸ್ನೇಹ ಏತಕ್ಕೆ ಅವರು ಸರ್ಕಾರದ ಮಂತ್ರಿಗಳಾದ ನಿಮಗಿಂತಲೂ ದೊಡ್ಡವರಲ್ಲ. ಮಂತ್ರಿಗಳು ಅಂಥವರ ಮೇಲೆ ಸವಾರಿ ಮಾಡತಕ್ಕ ಶಕ್ತಿ ಇಲ್ಲದಿದ್ದರೆ ನಾಳೆ ಅವರು ವಿಧಾನಸೌಧವನ್ನೂ ಹರಾಜಿಗೆ ಕೇಳಿಯಾರು ? ಈ ದೃಷ್ಟಿಯಿಂದ ಇಂಥಾ ಗುಂಪಿನ ಸ್ನೇಹ ಮಾಡತಕ್ಕದ್ದು ಅಪಾಯ. ಆದಕಾರಣ ಅವರ ಬಗ್ಗೆ ಎಚ್ಚರಿಕೆಯಿಂದ ಇರುವುದು ಒಳ್ಳೆಯದು. ಸೇಲ್ಸ್ ಟ್ಯಾಕ್ಸ್ ಮತ್ತು ಎಕ್ಸ್‌ಸೈಜ್ ಇಲಾಖೆಗಳಲ್ಲಿ ಅಧಿಕಾರಿಗಳು ಇನ್ನೂ ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡುವುದಾದರೆ ಸರ್ಕಾರಕ್ಕೆ ಆ ಬಾಬುಗಳಿಂದ ಇನ್ನೂ ಹೆಚ್ಚಿನ ಆದಾಯ ಬರುತ್ತದೆ. ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ ನಾನು ಒಂದು ವಿಷಯವನ್ನು ಹೇಳುತ್ತೇನೆ, ಹಿಂದೆ ವಸೂರಾಗಿದ್ದ ತೆರಿಗೆಯನ್ನು ವರ್ತಕರಿಗೆ ಹಿಂದಕ್ಕೆ ಕೊಡುವಾಗ ಅವಸರದಲ್ಲಿ ಒಂದು ವಾರದಲ್ಲಿ ನಾವಸ್ಸು ಕೊಟ್ಟರು. ಈಗ ಆದನ್ನೇ ಹಿಂದಕ್ಕೆ ಪಡೆಯುವುದರಲ್ಲಿ ವಿಳಂಬ ನೀತಿಯನ್ನು ಅನುಸರಿಸುತ್ತಿದ್ದಾರೆ. ದೊಡ್ಡ ದೊಡ್ಡ ದಳ್ಳಾಳಿಗಳು ಬಂದು ನಿಮ್ಮನ್ನು ಒತ್ತಾಯ ಮಾಡಿ ಈ ಕಾನೂನನ್ನು ಜಾರಿ ಮಾಡಬೇಡಿ ಆ ತೆರಿಗೆಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಕಾಲಾವಕಾಶವನ್ನು ಕೊಡಿ ಎಂದು ಕೇಳಿದ್ದರಿಂದ ಆ ಹಣವನ್ನು ವಸೂಲು ಮಾಡದೆ ಕಾದು ಕೊಂಡಿದ್ದಾರೆ. ಹಣವನ್ನು ವಾಪಸ್ಸು ಕೊಡವಾಗ ಇದ್ದಂತಹ ಆತುರ ಅದನ್ನು

(ಶ್ರೀ ಎಸ್. ಶಿವಪ್ಪ)

ವಸೂಲು ಮಾಡುವಾಗ ಏತಕ್ಕೆ ಇಲ್ಲ? ಇವಕ್ಕೆ ಕಾರಣ ಇದರಲ್ಲಿ ತಮಗೆ ಬೇಕಾದಂತಹ ಜನ ಇದ್ದದ್ದರಿಂದ ಇದರಲ್ಲಿ ಈ ಒಂದು ನೀತಿಯನ್ನು ನೀವು ಅನುಸರಿಸುತ್ತಿದ್ದೀರಿ. ಇದು ಸರಿಯಲ್ಲ. ಇವೊತ್ತು ಸೇಲ್ಸ್ ಟ್ಯಾಕ್ಸ್ ತಪ್ಪಿಸಿ ಕೊಳ್ಳುವವರು ಏನು ಉಪಾಯ ಮಾಡುತ್ತಾರೆ ಎಂದರೆ ಮದ್ರಾಸಿಗೆ ಹೋಗಿ ಅಲ್ಲಿ, ದೊಡ್ಡ ದೊಡ್ಡ ಫರ್ಮಗಳಲ್ಲಿ (ಸಿ) ಫಾರಂ ಹಾಕಿ 3 ಪರ್ಸೆಂಟ್‌ನಂತೆ ಚಾಸಿಗಳನ್ನು ಕೊಂಡುಕೊಳ್ಳುತ್ತಿದ್ದಾರೆ. ಅದೇ ಚಾಸಿಗಳನ್ನು ಮೈಸೂರಿನಲ್ಲಿ ಕೊಂಡುಕೊಳ್ಳಬೇಕಾದರೆ 10-12ಪರ್ಸೆಂಟ್ ಟ್ಯಾಕ್ಸ್ ಕೊಡಬೇಕಾಗುತ್ತದೆ. ಸೇಲ್ಸ್ ಟ್ಯಾಕ್ಸ್ ತೆರಿಗೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಮದ್ರಾಸಿಗೆ ಹೋಗಿ ಅಲ್ಲಿ ಚಾಸಿಗಳನ್ನು ವ್ಯಾಪಾರ ಮಾಡುತ್ತಾರೆ. ಒಬ್ಬೊಬ್ಬ ಸಬ್ ಕಂಟ್ರಾಕ್ಟರುಗಳು, ಸಬ್‌ಡೀಲರುಗಳು ಒಂದೊಂದು ಚಾಸಿಯಿಂದ ನಮ್ಮ ಸರ್ಕಾರದ ಬೊಕ್ಕಸಕ್ಕೆ ಬರತಕ್ಕಂಥ 5-6 ಸಾವಿರ ರೂಪಾಯಿಗಳನ್ನು ತಪ್ಪಿಸಿ ಸುಮಾರು 50 ಚಾಸಿಗಳನ್ನು ವ್ಯಾಪಾರ ಮಾಡುವುದರಿಂದ -3 ಲಕ್ಷ ರೂಪಾಯಿಗಳನ್ನು ಅವರು ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ. ಉಪಾಯವಾಗಿ ಸರ್ಕಾರದ ಬೊಕ್ಕಸಕ್ಕೆ ಬರುವ ಹಣವನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಇಂಥಾ ಹಣವನ್ನು ಸರ್ಕಾರದ ಬೊಕ್ಕಸಕ್ಕೆ ಜರೂರಾಗಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ.

ಮದ್ಯಪಾನಕ್ಕೆ ಸಂಬಂಧಪಟ್ಟ ಹಾಗೆ ಎಕ್ಸೈಜ್ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದೆರಡು ವಿಚಾರಗಳನ್ನು ಮಾತ್ರ ನಾನು ಹೇಳಬಯಸುತ್ತೇನೆ. ಮದ್ಯಪಾನದ ಪೂರಾಟದ ಹರಾಜು ಮಾಡಿದಾಗ ಅದರಿಂದ ಹೋದ ವರ್ಷ ಸರ್ಕಾರಕ್ಕೆ ಹಣ ಬಂದಿದೆ. ಆದರೆ ಈ ಸಾರಿ ಅಷ್ಟು ಬರುವುದೆಯೋ ಇಲ್ಲವೋ ಎನ್ನುವ ಅನುಮಾನ ಇದೆ. ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಮಧ್ಯದ ಅಂಗಡಿಗಳನ್ನು ಹರಾಜು ಮಾಡಿದ್ದಾರೆ. ಅದರಲ್ಲಿ ಸಾಕಷ್ಟು ಲಾಭ ಬರುವುದಿಲ್ಲವೆಂದು ಅದನ್ನು ಬಿಟ್ಟುಕೊಳ್ಳುಬಿಟ್ಟಿದ್ದಾರೆ. ಬಹುಶಃ ಇದು ಮುಂದೆ ಏನಾಗುತ್ತದೆಂದು ಗೊತ್ತಿಲ್ಲ. ಇದಕ್ಕೆ ಕಾರಣವೇನೆಂದರೆ ಇವತ್ತು ಪೂರಾಟಮಾಡತಕ್ಕ ಮದ್ಯ ಏನೆದೆ ಅದರ ಗುಣ ಒಳ್ಳೆಯದಿಲ್ಲ. ಅದರಲ್ಲಿ ಎಲ್ಲಾ ಅಡಲ್ಟ್ರೇಟೆಡ್ ಮತ್ತು ಇಂಟೋಕ್ಸಿಕೇಷನ್ ಸೇರಿಸಿರುವುದರಿಂದ ಜನರಿಗೆ ಇದರಲ್ಲಿ ನಂಬಿಕೆ ಹೋಗಿದೆ. ಅವರು ಅದರ ರುಚಿ ಕಂಡು ಅದು ಚೆನ್ನಾಗಿಲ್ಲವೆಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ಮತ್ತು ಇಂಥ ಅಂಗಡಿಗಳಿಗೆ ಅವರು ಹೋಗುವುದಿಲ್ಲ. ಇದರಿಂದ ಮದ್ಯದ ವ್ಯಾಪಾರ ಕಡಿಮೆಯಾಗಿದೆ. ಇವತ್ತು ಯಾರಿಗೆ ಇದನ್ನು ಕೊಡುತ್ತಿದ್ದೀರಿ, ಅವನು ಈ ಕಳ್ಳಭಟ್ಟಿ ಸಾರಾಯಿಯನ್ನು ಪೂರಾತ್ತಿರುತ್ತಾನೆ. ಈ ಅಡಲ್ಟ್ರೇಟೆಡ್ ಮದ್ಯದಿಂದ ಒಂದು ಲೀಟರಿನಲ್ಲಿ 4--5 ರೂಪಾಯಿ ಅವನಿಗೆ ಉಳಿಯುತ್ತದೆ. ಸರ್ಕಾರಕ್ಕೆ ಬರುವ ತೆರಿಗೆ ಸರಿಯಾಗಿ ಬರುವುದಿಲ್ಲ. ಅವನು ಒಂದೊಂದು ದಿವಸಕ್ಕೆ ದೊಡ್ಡ ದೊಡ್ಡ ಪೂರಾಟ ಮಾಡಿ 5-6 ಸಾವಿರ ರೂಪಾಯಿ ಉಳಿತಾಯ ಮಾಡುತ್ತಾನೆ. ಇದು ಸರ್ಕಾರಕ್ಕೆ ಗೊತ್ತಿಲ್ಲವೆಂದು ಹೇಳುವುದಿಲ್ಲ. ಇವರು ಗೊತ್ತಿದ್ದೂ ನಜರನ್ನು ಮಾಡಿ, ದೊಡ್ಡ ದೊಡ್ಡ ವ್ಯಕ್ತಿಗಳ ಪೋಷಣೆಯನ್ನು ಮಾಡುತ್ತಿದ್ದಾರೆ. ಆದ್ದರಿಂದ ನೀವು ಒಳ್ಳೆಯ ಕ್ವಾಲಿಟಿಯ ಮದ್ಯವನ್ನು ಕೊಡಿ. ಅದು ಬೀರಾಗಲಿ, ಹೆಂಡವಾಗಲಿ, ಅದನ್ನು ಸೀಲ್ ಮಾಡಿ ಕೊಡತಕ್ಕ ಕಾರ್ಯವನ್ನು ಮಾಡಬೇಕು. ಆದ್ದರಿಂದ ಈ ಒಂದು ಕ್ವಾಲಿಟಿಯನ್ನು ಇಟ್ಟುಕೊಂಡು, ಅದರ ಹಂಚಿಕೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತು ಈ ರಾಟರಿ ವಿಚಾರ. ಈ ಸರ್ಕಾರ ಇಂದು ಈ ಅವಸ್ಥೆಗೆ ಬಂದಿದೆ. ಎಲ್ಲಾ ಬಿಟ್ಟು ಭಂಗಿ ನೆಟ್ಟ ಎಂಬ ಗಾದೆಯು ಹಾಗೆ ಇವರು ಮಾಡಿದ್ದಾರೆ. ಭಂಗಿ ನೆಟ್ಟರೆ ಅದಕ್ಕೆ ಒಳ್ಳೆಯ ಬೆಲೆ ಬರುತ್ತವೆಂದು ಮಾಡುತ್ತಾರೆ. ಹಾಗೆ ಸರ್ಕಾರ ಎಲ್ಲಾ ಬಿಟ್ಟು ಈ ರಾಟ್ರಿಗೆ ಬಂದಿದ್ದಾರೆ. ಇದರಿಂದ ದೇಶಕ್ಕೆ ಎಷ್ಟು ಪ್ರಯೋಜನವಾಗುತ್ತದೆ, ಖಜಾನೆಗೆ ಎಷ್ಟು ಹಣ ಬರುತ್ತದೆ? ಮೊದಲನೆ ರಾಟರಿಗೆ 40 ಲಕ್ಷ ರೂಪಾಯಿ ಖರ್ಚು ಆಗಿದೆ. ಎರಡನೆಯ ರಾಟರಿಗೆ 60 ಲಕ್ಷ ಖರ್ಚಾಗಬಹುದೆಂದು ಹೇಳುತ್ತಿದ್ದಾರೆ. ಇದರಿಂದ ಕೇವಲ 20-25 ಲಕ್ಷ ರೂಪಾಯಿ ಖಜಾನೆಗೆ ಬರಬಹುದು. ಇದರಿಂದ ದೇಶದಲ್ಲಿ ಎಂಥ ಪರಿಣಾಮವಾಗಬಹುದು. ಇದನ್ನು ಯೋಚಿಸಿದ್ದೀರಾ? ಬೀದಿ ಬೀದಿಯಲ್ಲಿ ಇವತ್ತು ರಾಟರಿ ಟಿಕೆಟುಗಳನ್ನು ಪೂರಾಟ ಮಾಡುತ್ತಿದ್ದಾರೆ. ಚಿಕ್ಕಮಕ್ಕಳ ಸಹ ಪೆಪ್ಪರ್‌ಮೆಂಟಿಗೆ ದುಡ್ಡು ಕೊಟ್ಟರೆ, ಅದನ್ನು ರಾಟರಿ ಟಿಕೆಟ್ ಕೊಂಡು ಕೊಳ್ಳಲು ಇವತ್ತು ಹೇಳಿದ್ದಾರೆ. ಇದರಿಂದ ಮಕ್ಕಳಲ್ಲಿಯೂ ಒಂದು ಜೂಜುಗಾರ ಮನೋವೃತ್ತಿ ಬೆಳೆಯುತ್ತಿದೆ. ಇವು ಬೀದಿ ಬೀದಿಗಳಲ್ಲಿ ಜನರ ಮೇಲೆ ಇದೊಂದು ಕೆಟ್ಟ ಪರಿಣಾಮವನ್ನು ಬೀರುತ್ತಿದೆ. ಜೊತೆಗೆ ದೇಶದಲ್ಲಿ ಕೋಟ್ಯಾನುಕೋಟಿ ಬಿಡಿಪೈಸೆ ಪಾಸ್ತಿಯಾಗಿದ್ದಾರೆ. ಅವರ ಒಂದು ಫಿನಾನ್ಸ್ ಇಲಾಖೆಯೇ

ಇದಕ್ಕೆ ಇದೆ. ಅವರದ್ದು ಒಂದು ಪೆರಲಲ್ ಸರ್ಕಾರವೇ ಇದೆ. ಸಹಸ್ರಾರು ಕೋಟಿ ರೂಪಾಯಿ ನೋಟನ್ನು ಪ್ರಿಂಟ್ ಮಾಡಿ ಚಲಾವಣೆ ಮಾಡುತ್ತಿದ್ದಾರೆ. ನಿಮ್ಮ ಹಾಗೆ ಅವರಿಗೂ ಒಬ್ಬ ಫಿನಾನ್ಸ್ ಮಂತ್ರಿಯೂ ಇದ್ದಾನೆ. ಅಂಥವರು ಇರುವಾಗ ಈ ರಾಟರಿ ಉದ್ಯಮವನ್ನು ಕೊಟ್ಟು ಬಿಟ್ಟರೆ, ಇನ್ನೂ ಸುಲಭವಾಗಿ ಕೋಟಾ ಟಿಕೆಟ್ಟುಗಳನ್ನು ಪ್ರಿಂಟ್ ಮಾಡಿ ಮಾರಾಟ ಮಾಡುತ್ತಾರೆ. ಸರ್ಕಾರಕ್ಕೆ ಇದನ್ನು ತಡೆಯುತಕ್ಕ ಶಕ್ತಿ ಇದೆಯೇ ಇಲ್ಲವೇ ಎಂಬುದು ಅನುಮಾನವಾಗಿದೆ. ಕೋಟಾ ನೋಟಿನ ವ್ಯವಹಾರದಲ್ಲಿ ಲಕ್ಷ ಗಟ್ಟರೆ ಹಣ ಕೊಡುತ್ತಾರೆ, ಕೋಟಾ ಟಿಕೆಟಿನಲ್ಲಿ ಸಾವಿರಗಟ್ಟರೆ ಕೊಡುತ್ತಾರೆ. ಆದ್ದರಿಂದ ಈ ರಾಟರಿ ಟಿಕೆಟ್ ಯೋಜನೆಯನ್ನು ರದ್ದು ಮಾಡಿ ಬೇರೆ ರೀತಿಯ ಯೋಜನೆ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಇವತ್ತು ಈ ಸೇರ್ಸ್ ಟ್ಯಾಕ್ಸ್, ಎಕ್ಸೈಸ್, ಮತ್ತು ರಾಟರಿ ಈ ಮೂರು ಒಡಕಾಗಿದೆ. ಅದರಲ್ಲಿ ಆಗುವ ಅನಾಹುತವನ್ನು ಮುಚ್ಚಿದೆ ಹೋದರೆ, ಸರ್ಕಾರಕ್ಕೆ ಬರತಕ್ಕ ಅರ್ಧ ಭಾಗ ಹಣ ಬೇರೆಯವರ ಕೈಗೆ ಹೋಗುತ್ತದೆ, ಇದನ್ನು ಕಟ್ಟುನಿಟ್ಟಾಗಿ ಹಣಕಾಸಿನ ನಡಿವರು ಜಾರಿಗೆ ತರಬೇಕು. ಈ ಜೂಜಾಟವನ್ನು ಬ್ರಷ್ಟಾಚಾರದಲ್ಲಿರುವ, ಅದಕ್ಷವಾದ ಸರ್ಕಾರಕ್ಕೆ ವ್ಯವಹಾರ ಮಾಡಲು ನಾನು ಕೊಡುವುದಕ್ಕೆ ಸಮ್ಮತಿ ಸಿದ್ಧನಿಲ್ಲ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—Next, hon. Member Sri R. G. Wali to speak.

Directing Sri Vatal Nagaraj to withdraw

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಹೇಜೆ).—ಸ್ವಾಮಿ, ಈಗತಾನೇ ನಾನು ಕೃಷ್ಣರಾಜಪುರದಿಂದ ಬಂದಿದ್ದೇನೆ. ನಾನು ಒಂದು ನಿಲುವಳಿ ಸೂಚನೆಯನ್ನು ಕಳಿಸಿದ್ದೇನೆ. ಇದು ಬಹಳ ಮುಖ್ಯವಾದುದು. ಅಲ್ಲಿ ರಸ್ತೆ ರಸ್ತೆಯಲ್ಲಿ ಪೋಲೀಸರು ಇದ್ದಾರೆ. ಅಲ್ಲಿ ಪೋಲೀಸರು ಒಬ್ಬ ಹುಡುಗನನ್ನು ಹಿಡಿದುಕೊಂಡು ... ...

Mr. SPEAKER.—The notice was received by me at about 12-30 p.m. According to rules, it should have been given two hours before the commencement of the sitting. Further, since the matter has been fully discussed already, I have disallowed the notice.

Sri VATAL NAGARAJ.—ತಾವು ದಯವಿಟ್ಟು ಕೇಳಲೇಬೇಕು. ಇದು ಮುಖ್ಯವಾದ ವಿಚಾರ. * * * *

Mr. SPEAKER.—Is the hon. member not resuming his seat?

ಶ್ರೀ ವಾಟಾಳ್ ನಾಗರಾಜ್.—ಇಲ್ಲ, ನಾನು ಕೂತುಕೊಳ್ಳುವುದಿಲ್ಲ.

Mr. SPEAKER.—I direct the hon. Member to withdraw from the House. I will give him two minutes to withdraw from the House.

Sri VATAL NAGARAJ.—ಸಾಧ್ಯವಿಲ್ಲ. ನಾನು ಇದನ್ನು ಹೇಳಲೇ ಬೇಕು.

Mr. SPEAKER.—Since the hon. Member is defying the directions of the Chair, I name the hon. member for suspension from the services of the House.

Sri H. SIDDAVEERAPPA.—Sir, I rise to a point of order. There is no motion moved in that behalf.

ಶ್ರೀ ಆರ್. ದುರ್ಗಾನಂದ ನಾಗರ್.—ಮಾನ್ಯ ಸದಸ್ಯರು ನೊಂದು ಬಂದಿದ್ದಾರೆ. ಏನೋ ಅಲ್ಲಿ ಆಗಿರಬಹುದು. ಸ್ವಲ್ಪ ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ. ಏಕೆ ಸಸ್ಪೆಷನ್‌ನಿಗೆ ಆರ್ಡರ್ ಮಾಡುತ್ತೀರಾ? ಅಲ್ಲಿ ಏನೋ ಅನಾಹುತ ಆಗಿರಬಹುದು.

****Matter not recorded as directed by the Chair.